**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 889/2022**

| | | | |
|---|---|---|---|
| ಸಾಕ್ಷಿಯ ಹೆಸರು | : ಮಾಲಾ | ಸಿ.ಡಬ್ಲ್ಯು | 1 |
| ಗಂಡನ ಹೆಸರು | : ಮೂರ್ತಿ | ಪಿ.ಡಬ್ಲ್ಯು | 1 |
| ವಯಸ್ಸು | : 42 ವರ್ಷ | | |
| ಉದ್ಯೋಗ | : ಮೀನು ವ್ಯಾಪಾರ | | |
| ವಾಸ ಸ್ಥಳ | : ಭದ್ರಾವತಿ | | |

**ದಿನಾಂಕಃ 18-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಮೃತ ಮೂರ್ತಿ ನನ್ನ ಗಂಡ. ಚಾಸಾ-2 ರಿಂದ 11 ರವರ ಪರಿಚಯ ಇರುತ್ತದೆ. ಈಗ ಎರಡು ವರ್ಷಗಳ ಹಿಂದೆ ನನ್ನ ಗಂಡ ಎಂ ಸಿ ಹಳ್ಳಿಯಲ್ಲಿ ಆದ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದಾರೆ. ಸದರಿ ಅಪಘಾತದ ವಿಷಯ ಚಾಸಾ-11 ರವರಿಂದ ಗೊತ್ತಾಯಿತು. ಆ ಸಮಯದಲ್ಲಿ ನಾನು ಮನೆಯಲ್ಲಿದೆ. ಅಪಘಾತವಾದ ಸ್ಥಳ ನಮ್ಮ ಮನೆಯಿಂದ 10 ಕಿ.ಮೀ ದೂರದಲ್ಲಿತ್ತು. ಆ ಸಮಯದಲ್ಲಿ ನನ್ನ ಗಂಡ ನಮ್ಮ ಓಮಿನಿ ಕಾರಿನಲ್ಲಿ ಭದ್ರಾವತಿಯಿಂದ ತರೀಕೆರೆಯ ಕಡೆಗೆ ಬರುತ್ತಿದ್ದರು. ಒಂದು ಬಸ್ಸಿನಿಂದ ಅಪಘಾತ ಆಗಿರುತ್ತದೆ, ಸದರಿ ಬಸ್ಸು ತರೀಕೆರೆಯಿಂದ ಶಿವಮೊಗ್ಗ ಕಡೆಗೆ ಹೋಗುತ್ತಿತ್ತು. ನನ್ನ ಗಂಡ ಸ್ಥಳದಲ್ಲಿಯೇ ತೀರಿಕೊಂಡಿದ್ದರು. ಚಾಸಾ-11 ರಿಂದ ಈ ಬಗ್ಗೆ ಮಾಹಿತಿ ತಿಳಿದುಕೊಂಡು ನಾನು ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದಿನಾಂಕ 28-05-2022 ರ ಪಂಚನಾಮೆ ಮೇಲೆ ಇರುವ ಸಹಿ ನನ್ನದೇ ಇರುತ್ತದೆ, ಅದನ್ನು ನಿಪಿ.2, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಫೋಟೊವನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಅಮಾನತುಪಂಚನಾಮೆಯನ್ನು ನಿಪಿ.5, ಸಾಕ್ಷಿಯನ್ನು ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ.6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ.2 ಅನ್ನು ಜರುಗಿಸಲು ಸ್ಥಳವನ್ನು ನಾನೇ ತೋರಿಸಿದ್ದೇನೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ನನ್ನ ಜೊತೆ ಸಹಿ ಹಾಕಿದ್ದಾರೆ. ನಿಪಿ.5 ಅನ್ನು ಮಾಡುವಾಗ ಅಪಘಾತಕ್ಕೆ ಒಳಗಾದ ನಮ್ಮ ವಾಹನವನ್ನು ಅಮಾನತುಪಡಿಸಿಕೊಳ್ಳಲಾಗಿದೆ. ಈಗ ತೋರಿಸುತ್ತಿರುವ ಬಸ್ಸಿನಿಂದಲೇ ಅಪಘಾತ ಆಗಿರುತ್ತದೆ. ಸದರಿ ಬಸ್ಸು ಇರುವ ಫೋಟೊವನ್ನು ನಿಪಿ.8 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿಲ್ಲ ಮತ್ತು ಪೊಲೀಸರು ನನಗೆ ತೋರಿಸಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ನಿಪಿ.8 ರಲ್ಲಿ ಕಾಣಿಸುವ ಬಸ್ಸನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಅತೀ ವೇಗವಾಗಿ ಮತ್ತು ನಿರ್ಲಕ್ಷತನದಿಂದ ನಡೆಸಿಕೊಂಡು ಬಂದು ಅಪಘಾತಡಿಸಿದ್ದಾನೆ ಎಂದರೆ ನಾನು ನೋಡಿಲ್ಲ, ಇದೇ ಮೊದಲ ಬಾರಿಗೆ ನೋಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಅಪಘಾತ ಆಗುವ 10 ವರ್ಷಗಳ ಪೂರ್ವದಲ್ಲಿ ನಮ್ಮ ವಾಹನ ಖರೀದಿ ಮಾಡಿರಬಹುದು. ನನ್ನ ಗಂಡನಿಗೆ ಸದರಿ ವಾಹನವನ್ನು ಚಲಾಯಿಸಲು ಪರವಾನಿಗೆ ಇದ್ದ ಬಗ್ಗೆ ಲೈಸೆನ್ಸ್ ಕೊಟ್ಟಿದ್ದೇನೆ. ಅವರಿಗೆ ಯಾವುದೇ ಲೈಸೆನ್ಸ್ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಲೈಸೆನ್ಸ್ ಇಲ್ಲದ ಕಾರಣ ತಾವೇ ತಮ್ಮ ತಪ್ಪಿನಿಂದ ಅಪಘಾತ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅರುಣ ನನ್ನ ಸಂಬಂಧಿಕ ಆಗಬೇಕು. ನನ್ನ ಸಮಕ್ಷಮ ಯಾವುದೇ ಸ್ಥಳ ಮತ್ತು ಜಪ್ತಿ ಪಂಚನಾಮೆ ಪೊಲೀಸರು ಜರುಗಿಸಿಲ್ಲ ಎಂದರೆ ಸರಿಯಲ್ಲ, ಅವರು ಹೇಳಿದ ಸ್ಥಳಗಳಲ್ಲಿ ಕೇವಲ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಓ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***